# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
## ಬೆಂಗಳೂರು-560 001
### ಅಧಿಸೂಚನೆ ಸಂಖ್ಯೆ: ಎಸ್/03/1, ಬೆಂಗಳೂರು, ದಿನಾಂಕ ಸೆಪ್ಟೆಂಬರ್ 14, 2012

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಖರೀದಿ) (ಎರಡನೇ ತಿದ್ದುಪಡಿ) ನಿಯಮಾವಳಿಗಳು, 2012**

**ಪೀಠಿಕೆ**

ವಿದ್ಯುಚ್ಛಕ್ತಿ ಕಾಯಿದೆ 2003ರ(2003ರ ಕೇಂದ್ರೀಯ ಕಾಯಿದೆ 36) ಪರಿಚ್ಛೇದ 86ರ ಉಪಪರಿಚ್ಛೇಧ(1)ರ ಕಲಮು (ಇ) ಹಾಗೂ ಪರಿಚ್ಛೇದ 181ರ ಅಡಿಯಲ್ಲಿ ಮತ್ತು ಇದರ ಪರವಾಗಿ ದತ್ತವಾದ ಇತರ ಎಲ್ಲ ಅಧಿಕಾರಗಳ ಪ್ರಕಾರ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಅಧಿಸೂಚನೆ ಸಂಖ್ಯೆ ಎಸ್/03/1, ದಿನಾಂಕ 16.03.2011ರ ಮೂಲಕ, ಕವಿನಿಆ(ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಖರೀದಿ)ನಿಯಮಾವಳಿಗಳು, 2011ನ್ನು [ಮೂಲ ನಿಯಮಾವಳಿ ಎಂದು ಇಲ್ಲಿ ಕರೆಯಲ್ಪಟ್ಟಿದೆ] ಹೊರಡಿಸಿ, ಅದನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ 31.03.2011ರಂದು ಪ್ರಕಟಪಡಿಸಿತ್ತು.

ಆಯೋಗವು ದಿನಾಂಕ 20.12.2011ರಂದು ಹೊರಡಿಸಿದ ಅಧಿಸೂಚನೆಯಲ್ಲಿ ಮೂಲ ನಿಯಮಾವಳಿಗೆ ಕೆಲವು ತಿದ್ದುಪಡಿಗಳನ್ನು ಮಾಡಿ, ಕರ್ನಾಟಕ ರಾಜ್ಯ ಪತ್ರದಲ್ಲಿ ಅದನ್ನು 2.1.2012 ರಂದು ಪ್ರಕಟಿಸಿತು.

ಮೇಲಿನ ನಿಯಮಾವಳಿಗಳ ಖಂಡ ಸಂಖ್ಯೆ 7(ಡಿ) ಬಗ್ಗೆ ಹಲವಾರು ವ್ಯಕ್ತಿಗಳು ಸ್ಪಷ್ಟೀಕರಣ ಕೇಳಲಾಗಿ, ಆಯೋಗವು ಖಂಡ ಸಂಖ್ಯೆ 7(ಡಿ) ಗೆ ತಿದ್ದುಪಡಿ ತರಲು ಅವಶ್ಯಕತೆ ಇದೆ ಎಂದು ತೀರ್ಮಾನಿಸಿತು. ಆಯೋಗವು ತಾ: 18.6.2012 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಹೊರಡಿಸಿದ ಅಧಿಸೂಚನೆಯಲ್ಲಿ ಖಂಡ ಸಂಖ್ಯೆ 7(ಡಿ) ಗೆ ಕೆಲವು ತಿದ್ದುಪಡಿಯನ್ನು ಪ್ರಸ್ತಾಪಿಸಿ, ಆಸಕ್ತ ವ್ಯಕ್ತಿಗಳಿಂದಸ ಅಭಿಪ್ರಾಯ/ಸಲಹೆಗಳನ್ನು ಆಹ್ವಾನಿಸಿತು. ನಾಲ್ಕು ವ್ಯಕ್ತಿಗಳು ತಮ್ಮ ಲಿಖಿತ ಅಭಿಪ್ರಾಯಗಳನ್ನು ಆಯೋಗಕ್ಕೆ ಸಲ್ಲಿಸಿದರು.

ಆಯೋಗವು, ತನ್ನ ಕಛೇರಿಯಲ್ಲಿ ಸ್ವೀಕರಿಸಿದ ಅಭಿಪ್ರಾಯ ಹಾಗೂ ಸಲಹೆಗಳನ್ನು ಯುಕ್ತ ರೀತಿಯಲ್ಲಿ ಪರಿಗಣಿಸಿ, ವಿದ್ಯುಚ್ಛಕ್ತಿ ಕಾಯಿದೆ 2003ರ(2003ರ ಕೇಂದ್ರೀಯ ಕಾಯಿದೆ 36)ಪರಿಚ್ಛೇದ 86ರ ಉಪಪರಿಚ್ಛೇಧ(1)ರ ಕಲಮು (ಇ)ಯ ಉಪ ಕಲಮು(1)ರ ಜೊತೆಗೆ ಓದಿಕೊಳ್ಳಲಾದ ಪರಿಚ್ಛೇದ 181 ಅಡಿಯಲ್ಲಿ ಹಾಗೂ ಇದರ ಪರವಾಗಿ ದತ್ತವಾದ ಇತರ ಎಲ್ಲ ಅಧಿಕಾರಗಳ ಪ್ರಕಾರ, ಖಂಡ ಸಂಖ್ಯೆ 7(ಡಿ)ಗೆ ತಿದ್ದುಪಡಿ ತಂದು ಕಳಕಂಡಂತೆ ನಿಯಮಾವಳಿಯನ್ನು ರೂಪಿಸಿದೆ:

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಖರೀದಿ) (ಎರಡನೇ ತಿದ್ದುಪಡಿ) ನಿಯಮಾವಳಿಗಳು, 2012**

1. ಕಿರು ಶೀರ್ಷಿಕೆಯ ಅನ್ವಯಿಸುವಿಕೆ ಹಾಗೂ ಪ್ರಾರಂಭ :
   - (i) ಈ ನಿಯಮಾವಳಿಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ(ಮರಳಿ ಪಡೆಯಬಹುದಾದ ಮೂಲಗಳಿಂದ ವಿದ್ಯುತ್ ಖರೀದಿ) (ಎರಡನೇ ತಿದ್ದುಪಡಿ) ನಿಯಮಾವಳಿಗಳು, 2012 ಎಂದು ಕರೆಯಲಾಗುತ್ತದೆ.
   - (ii) ಈ ನಿಯಮವಾಳಿಗಳು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುತ್ತವೆ.
   - (iii) ಈ ನಿಯಮಾವಳಿಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುತ್ತವೆ.

**2. ಕಲಮು–2ರಲ್ಲಿ ಇರುವ ಹಾಲಿ ನಿಯಮವನ್ನು ಕಲಮು–3ರಲ್ಲಿ ಇರುವ ನಿಯಮದಿಂದ ಬದಲಾಯಿಸತಕ್ಕದ್ದು:-**

| ಕಲಮು–1 ಖಂಡ ಸಂಖ್ಯೆ | ಕಲಮು–2 ಹಾಲಿ ಇರುವ ನಿಯಮಾವಳಿ | ಕಲಮು–3 ತಿದ್ದುಪಡಿ |
|---|---|---|
| 7(ಡಿ) | **ನವೀಕರಿಸಬಹುದಾದ ಇಂಧನ ಮೂಲಗಳನ್ನು ಆಧರಿಸಿರುವ ಕ್ಯಾಪ್ಟಿವ್ ವಿದ್ಯುತ್ ಉತ್ಪಾದಕರು, ಕ್ಯಾಪ್ಟಿವ್ ವಿದ್ಯುತ್ ಬಳಕೆಗೆ ಉಪಯೋಗಿಸಿದ ವಿದ್ಯುತ್ತನ್ನೂ ಸೇರಿದಂತೆ, ತಮ್ಮ ವಿದ್ಯುತ್ ಸ್ಥಾವರದಿಂದ ಉತ್ಪಾದಿಸಿದ ವಿದ್ಯುತ್ತಿಗೆ ಆರ್.ಇ.ದೃಢೀಕರಣ ಪತ್ರದ ಅಧಿಕೃತ ಮಾನ್ಯತೆ ಪಡೆಯಲು ಅರ್ಹತೆ ಹೊಂದಿರುತ್ತಾರೆ.** | **ವಿದ್ಯುತ್ ಜಾಲಕ್ಕೆ ಸಂಪರ್ಕ ಹೊಂದಿರುವ ನವೀಕರಿಸಬಹುದಾದ ಇಂಧನ ಮೂಲಗಳನ್ನು ಆಧರಿಸಿರುವ ಕ್ಯಾಪ್ಟಿವ್ ವಿದ್ಯುತ್ ಉತ್ಪಾದಕರು, ತಾವು ಉತ್ಪಾದಿಸಿದ ವಿದ್ಯುತ್‌ಅಲ್ಲಿ ಕ್ಯಾಪ್ಟಿವ್ ಬಳಕೆಗೆ ಉಪಯೋಗಿಸಿದ ವಿದ್ಯುತ್ತಿಗೆ ಮತ್ತು ಉಳಿದ ವಿದ್ಯುತ್ ಏನಾದರೂ ಇದ್ದಲ್ಲಿ, ಅದನ್ನು ವಿತರಣಾ ಲೈಸೆನ್ಸ್‌ದಾರರಿಗೆ ಆಯೋಗವು ಕಾಲಾನುಕಾಲಕ್ಕೆ ನಿಗಧಿಪಡಿಸಿದ ಒಟ್ಟುಗೂಡಿಸಿದ ಸರಾಸರಿ ದರದಲ್ಲಿ ಮಾರಿದ ವಿದ್ಯುತ್ತಿಗೆ, ಆರ್.ಇ.ದೃಢೀಕರಣ ಪತ್ರದ ಅಧಿಕೃತ ಮಾನ್ಯತೆ ಪಡೆಯಲು ಅರ್ಹತೆ ಹೊಂದಿರುತ್ತಾರೆ.** |

ಆಯೋಗದ ಆದೇಶದ ಮೇರೆಗೆ

ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ